ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಕಳೆದ 3 ವರ್ಷಗಳಲ್ಲಿ ರೂ. 1769.00 ಲಕ್ಷಗಳನ್ನು ಬಂಡವಾಳವಾಗಿ ಸರ್ಕಾರ ಮಂಜೂರು ಮಾಡಿರುತ್ತದೆ.

ಆ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ವಿವಿಧ ಸ್ವಯಂ ಉದ್ಯೋಗ ತರಬೇತಿಯನ್ನು ಹಿಂದುಳಿದ ವರ್ಗದವರಿಗಾಗಿ ಕಳೆದ 3 ವರ್ಷಗಳಲ್ಲಿ 3442 ಜನರು ಸ್ವಯಂ ಉದ್ಯೋಗ ಯೋಜನೆಯಡಿ ಪಡೆದಿರುತ್ತಾರೆ. ವರ್ಷಾವಾರು ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ವರ್ಷ	ತರಬೇತಿ ಪಡೆದವರ ಸಂಖ್ಯೆ
1)	1997-98	1267
2)	1998-89	745
3)	1999-2000	1430
	ಒಟ್ಟು	3442

ಪೌರಕಾರ್ಮಿಕರ ನೇಮಕಾತಿಯಲ್ಲಿ ಅನುಸರಿಸುತ್ತಿರುವ ದ್ವಿಮುಖ ನೀತಿ.

2421(3102)

ಶ್ರೀ ನಾರಾಯಣ ಸ್ವಾಮಿ (ಅನೇಕಲ್): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಪೌರ ಕಾರ್ಮಿಕ ಹುದ್ದೆಗಳ ನೇಮಕಾತಿಯಲ್ಲಿ ಮಹಾನಗರಪಾಲಿಕೆ ಮತ್ತು ಪುರಸಭೆಗಳಿಗೆ ನೇಮಕಾತಿ ವಿಷಯದಲ್ಲಿ ದ್ವಿಮುಖ ನೀತಿ ಅನುಸರಿಸುತ್ತಿರುವುದು ನಿಜವಲ್ಲವೆ?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಮಹಾನಗರ ಪಾಲಿಕೆಗಳಲ್ಲಿ ಹಾಗೂ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಪೌರಕಾರ್ಮಿಕರ ಹುದ್ದೆಗಳು ಇದೆ. ಇವುಗಳನ್ನು ಸಂಬಂಧಿಸಿದ

ನಿಯಮಗಳನ್ವಯ ನೇಮಕಾತಿ ಮಾಡಲು ಅವಕಾಶ ಇದೆ. ರಾಜ್ಯದ ಪುರ/ನಗರಸಭೆಗಳಲ್ಲಿ ಒಟ್ಟು 2853 ಪೌರಕಾರ್ಮಿಕರ ಹುದ್ದೆಗಳು ಖಾಲಿ ಇವೆ ಆದರೆ ಸರ್ಕಾರ ಮಿತವ್ಯಯ ಸಾಧಿಸುವ ದೃಷ್ಟಿಯಿಂದ ಸರ್ಕಾರದ ಸುತ್ತೋಲೆ ಸಂಖ್ಯೆ.ಎಫ್.ಡಿ. 1 ಬಿ.ಇ.ಎಂ.98 ದಿನಾಂಕ 23.10.98 ನೇಮಕಾತಿಗಳಿಗೆ ನಿಷೇಧ ವಿಧಿಸಿದೆ. ಈ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಲ್ಲಿ ಅನುಕಂಪದ ಆಧಾರದ ಮೇಲೆ ಮಾತ್ರ ನೇಮಕಾತಿಯನ್ನು ಮಾಡಿಕೊಳ್ಳಲಾಗುತ್ತಿದೆ. ಇದನ್ನು ಹೊರತು ಪಡಿಸಿ ಪೌರಕಾರ್ಮಿಕರ ಹುದ್ದೆಗೆ ನಗರಪಾಲಿಕೆ ಅಥವ ಪುರ/ಸಭೆಗಳಲ್ಲಿ ನೇಮಕಾತಿ ಮಾಡಿಕೊಳ್ಳುತ್ತಿಲ್ಲ. ಈ ವಿಷಯದಲ್ಲಿ ದ್ವಿಮುಖ ನೀತಿ ಅನುಸರಿಸುತ್ತಿಲ್ಲ.

Backward Classes Girls Hostels.

2422(3133)

Sri.Prakash Khandre (Balki): Will the Minister for Social welfare be pleased to State.

(a) Is it not true that 15 prematric and 10 post-matric hostels for Backward Classes have been sanctioned during 1999-2000.

(b) If so the details of places where these hostels are sanctioned.

(c) Out of this the number of hostels in Bidar District. (Taluk-wise details to be furnished).

(d) Whether new hostels in Bidar District particularly at Bhalki will be sanctioned during the current year?

(e) If not the reasons.

Sri. Kagodu Thimmappa (MINISTER FOR SOCIAL WELFARE):

(a) YES.